**ದಿನಾಂಕಃ 14.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

## ಪಾಟೀಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ ಜಿ.ಆರ್.ಎಸ್ ಅವರಿಂದ –

**1.** ನಾನು **3**ನೇ ಎದುರುದಾರರ ಕಂಪನಿಯಲ್ಲಿ ಅಧಿಕೃತ ಅಧಿಕಾರಿ ಆಗಿದ್ದೇನೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ನುಡಿದಿದ್ದು, ಈ ಬಗ್ಗೆ ನಾನು ನ್ಯಾಯಾಲಯಕ್ಕೆ ಅಧಿಕಾರ ಪತ್ರ ಹಾಜರುಪಡಿಸಿರುತ್ತೇನೆ. ಆದರೆ ನಾನು ಆ ರೀತಿ ಯಾವುದೇ ಅಧಿಕಾರ ಪತ್ರ ಹಾಜರುಪಡಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸದರಿ ಅಧಿಕಾರ ಪತ್ರ ಕಣ್ತಪ್ಪಿನಿಂದ ನಮ್ಮ ಕಡತದಲ್ಲಿಯೇ ಉಳಿದುಹೋಗಿದೆ ಅದನ್ನು ಹಾಜರುಪಡಿಸಿಸಲು ಅನುಮತಿ ಕೋರುತ್ತೇನೆ ಎಂದು ನುಡಿಯುತ್ತಾರೆ.

**2.** ಅರ್ಜಿದಾರರ ಅರ್ಜಿ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ಅರ್ಜಿದಾರರು ನ್ಯಾಯಾಲಯಕ್ಕೆ ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ನಾನು ತಿಳಿದುಕೊಂಡಿಲ್ಲ. ಅರ್ಜಿಗೆ ತಕರಾರು ಸಲ್ಲಿಸಲು ಮಾಹಿತಿಯನ್ನು ನಮ್ಮ ಕಂಪನಿಯ ಮುಖ್ಯಸ್ಥರು ನೀಡಿರುತ್ತಾರೆ, ಸದರಿ ತಕರಾರು ತಯಾರಿಸುವಾಗ ನಮ್ಮ ಕಂಪನಿಯ ಮುಖ್ಯಸ್ಥರಾಗಿ ಯಾರಿದ್ದರು ಎಂದು ನನಗೆ ತಿಳಿದಿಲ್ಲ.

3. ಅರ್ಜಿದಾರರಿಗೆ ಅಪಘಾತ ಪಡಿಸಿದ ಸಂಬಂಧ ಗೋಣಿಕೊಪ್ಪ ಪೋಲೀಸ್ ಠಾಣೆಯವರು ತಮ್ಮ ಸಿಆರ್ 64/19ರಲ್ಲಿ ಐಪಿಸಿ ಕಲಂ 279, 337 ರಡಿ ಪ್ರಕರಣ ದಾಖಲು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ, ಆದರೆ ಅದು ಸುಳ್ಳು ಪ್ರಕರಣ. ಸಿ.ಸಿ.636/2019ರಂತೆ ಪೊನ್ನಂಪೇಟೆ ನ್ಯಾಯಾಲಯದಲ್ಲಿ ಅಂತಿಮ ವರದಿ

ಸಲ್ಲಿಸಿದ್ದಾರೆ ಎಂದರೆ ಆ ವಿಚಾರ ನನಗೆ ಗೊತ್ತಿಲ್ಲ. ಸಿ.ಸಿ.636/2019ರಲ್ಲಿ 1 ಮತ್ತು 2ನೇ ಎದುರುದಾರರು ತಪ್ಪು ಒಪ್ಪಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

4. ಸಿ.ಸಿ.636/2019 ಸುಳ್ಳು ಪ್ರಕರಣ ಎಂದು ನಾನು ಹೇಳುತ್ತಿರುವ ಬಗ್ಗೆ ಎಲ್ಲಿಯಾದರು ಅದನ್ನು ಪ್ರಶ್ನೆ ಮಾಡಿದ್ದೇನಾ ಎಂದರೆ ಪ್ರಶ್ನೆ ಮಾಡಿಲ್ಲ, ಕಾರಣ ನಾವು ಅದರಲ್ಲಿ ಪಕ್ಷಗಾರರಲ್ಲ. ಈ ಅರ್ಜಿಯ ನೋಟೀಸ್ ನಮಗೆ ಜಾರಿಯಾದ ನಂತರ ಗೋಣಿಕೊಪ್ಪದ ಸಿ.ಸಿ.636/2019ರಲ್ಲಿ ತನಿಖಾಧಿಕಾರಿಗಳು ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿದ್ದಾರೆ ಎಂದು ನಾನು ಎಲ್ಲಿಯಾದರು ಅದನ್ನು ಪ್ರಶ್ನೆ ಮಾಡಿದ್ದೇನಾ ಎಂದರೆ ನಾವು ಅದರಲ್ಲಿ ನೇರ ಪಕ್ಷಗಾರರಲ್ಲ, ಆದ್ದರಿಂದ ಪ್ರಶ್ನೆ ಮಾಡಿಲ್ಲ.

5. ನಾನು 1 ಮತ್ತು 2ನೇ ಎದುರುದಾರರ ಪರ ಕೂಡ ಪ್ರಕರಣದಲ್ಲಿ ಮುಂದುವರಿಯುತ್ತೇನೆ ಎಂದು ಈ ಪ್ರಕರಣದಲ್ಲಿ ಒಂದು ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನಿ.ಆರ್ .1 ರ ದಾಖಲೆಯನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಿದ್ದೇನೆ ಎಂದರೆ fall while walking at Hathuru nearby KEB, engineer Krishnakumar and others.... ಎಂದಿದ್ದು, ಸದರಿ ಅಪಘಾತವು ನಮ್ಮ ಕಂಪನಿಯ ವಿಮೆಗೆ ಒಳಪಟ್ಟ ವಾಹನದಿಂದ ಆಗಿಲ್ಲ, ನಿಆರ್.1ರ ದಾಖಲೆಯಲ್ಲಿ ನಮೂದಿಸಿರುವ ಕಾರಣಕ್ಕೆ ಉಂಟಾಗಿದೆ ಎಂದು ತೋರಿಸಲು ಹಾಜರುಪಡಿಸಿರುತ್ತೇನೆ.

6. ನಮ್ಮ ತಕರಾರಿನಲ್ಲಿ ದಿಃ 11.06.2019ರಲ್ಲಿ ಕೆಎ–12 ಜೆಡ್ 1607ರ ವಾಹನಕ್ಕೆ ನಮ್ಮ ಕಂಪನಿಯ ವಿಮೆ ಚಾಲ್ತಿಯಲ್ಲಿತ್ತು ಎಂದು ತಿಳಿಸಿದ್ದೇನಾ ಅಥವಾ ಚಾಲ್ತಿಯಲಿರಲಿಲ್ಲ ಎಂದು ತಿಳಿಸಿದ್ದೇವಾ ಎಂದರೆ ಸಾಕ್ಷಿ ಚಾಲ್ತಿಯಲಿರಲಿಲ್ಲ ಎಂದು ತಿಳಿಸಿದ್ದೇವೆ. ಆದರೆ ಅಪಘಾತದ ಸಮಯದಲ್ಲಿ ಸದರಿ ವಾಹನಕ್ಕೆ ನಮ್ಮ ಕಂಪನಿಯ ವಿಮೆ ಚಾಲ್ತಿಯಲ್ಲಿತ್ತು. ಚಾಲ್ತಿಯಲ್ಲಿದ್ದ ಪಕ್ಷದಲ್ಲಿ ನಾವು ಏಕೆ ಚಾಲ್ತಿಯಲ್ಲಿರಲಿಲ್ಲ

ತಕರಾರಿನಲ್ಲಿ ತಿಳಿಸಿದ್ದೇವೆ ಎಂದರೆ ಸಾಕ್ಷಿ ತಕ್ಷಣಕ್ಕೆ ಎಲ್ಲಾ ಮಾಹಿತಿ ದೊರಕಿರಲಿಲ್ಲ ಆದ್ದರಿಂದ ಫಾರ್ಮಲ್ ಆಗಿ ಅರ್ಜಿ ವಿಚಾರವನ್ನು ನಿರಾಕರಿಸಿದ್ದೇನೆ ಎನ್ನುತ್ತಾರೆ. ತಕರಾರು ಸಲ್ಲಿಸಿದ ಎಷ್ಟು ದಿನಕ್ಕೆ ನಾನು ಪ್ರಕರಣದ ವಿಚಾರ ತಿಳಿದುಕೊಂಡೆ ಎಂದರೆ ಪೋಲೀಸ್ ದಾಖಲೆಗಳು ದೊರಕಿದ ನಂತರ ತಿಳಿದುಕೊಂಡಿರುತ್ತೇನೆ. ನಾನು ಪೋಲೀಸರು ಸಲ್ಲಿಸಿದ್ದ ದೋಷಾರೋಪಣ ಪತ್ರದಲ್ಲಿ ಈ ಅಪಘಾತಕ್ಕೆ ಸಂಬಂಧಪಟ್ಟಂತೆ ಇದ್ದಂತಹ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ.

7. ನಾನು ಪಡೆದುಕೊಂಡ ದಾಖಲೆಗಳ ಪ್ರಕಾರ ನಮ್ಮ ಕಂಪನಿಯ ವಿಮೆಗೆ ಒಳಪಟ್ಟ ವಾಹನ ಅರ್ಜಿದಾರರಿಗೆ ಅಪಘಾತ ಪಡಿಸಿದೆ ಎಂದು ತಿಳಿದುಬಂತು, ಸಾಕ್ಷಿ ಮುಂದುವರಿದು ನಿ.ಆರ್.1ರ ದಾಖಲೆ ಪಡೆದ ನಂತರ ಅದು ಸುಳ್ಳು ಪ್ರಕರಣ ಎಂದು ತಿಳಿದುಬಂತು ಎಂದು ನುಡಿಯುತ್ತಾರೆ. ತನಿಖಾಧಿಕಾರಿ ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ ಎಂದು ನಾನು ಅವರ ವಿರುದ್ಧ ಯಾವುದೇ ಕ್ರಮ ಜರುಗಿಸಿರುವುದಿಲ್ಲ, ಸಾಕ್ಷಿ ಪುನಃ ನುಡಿಯುತ್ತಾರೆ ನಾವು ಈ ಪ್ರಕರಣದಲ್ಲಿ ನೇರ ಪಕ್ಷಗಾರರಲ್ಲ.

8. ನಾವು ಸದರಿ ಸಿ.ಸಿ.ಪ್ರಕರಣದಲ್ಲಿ ನೇರ ಪಕ್ಷಗಾರರಲ್ಲ ಎಂದು ಹೇಳಿದ್ದು ತನಿಖಾಧಿಕಾರಿಗಳಿಂದ ಯಾವ ಆಧಾರದ ಮೇಲೆ ದಾಖಲೆಗಳನ್ನು ಪಡೆದುಕೊಂಡೆ ಎಂದರೆ ಈ ಪ್ರಕರಣದಲ್ಲಿ 3ನೇ ಎದುರುದಾರರಾಗಿ ಸೇರ್ಪಡೆ ಮಾಡಿದ ಆಧಾರದ ಮೇಲೆ ದಾಖಲೆಗಳನ್ನು ಪಡೆದುಕೊಂಡಿದ್ದೇನೆ ಎನ್ನುತ್ತಾರೆ. ಅಪಘಾತದ ಸಮಯದಲ್ಲಿ 1ನೇ ಎದುರುದಾರರ ವಾಹನಕ್ಕೆ ನಮ್ಮ ಕಂಪನಿಯ ವಿಮೆ ಚಾಲ್ತಿಯಲ್ಲಿತ್ತು ಮತ್ತು ತನಿಖಾಧಿಕಾರಿಗಳು ಸದರಿ ವಾಹನದ ವಿರುದ್ಧ ದೋಷಾರೋಪಣ ಪತ್ರ ಕೂಡ ಸಲ್ಲಿಸಿದ್ದಾರೆ ಆದ್ದರಿಂದ ಅರ್ಜಿದಾರರಿಗೆ ವಿಮಾ ಪರಿಹಾರ ಹಣ ನೀಡಲು ನಾವು ಹೊಣೆಗಾರರಾಗಿದ್ದೇವೆ ಎಂದರೆ ಸರಿಯಲ್ಲ.

9. ನಿಪಿ.9ರ ಡಿಸ್ಚಾರ್ಜ್ ಸಮ್ಮರಿಯನ್ನು ನಾನು ನೋಡಿದ್ದೇನೆ. ಸದರಿ ನಿಪಿ.9 ದಾಖಲೆಯಲ್ಲಿ ಸಹ ವೈದ್ಯರು ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದಾರೆ ಎಂದು ನಮೂದಿಸಿದ್ದಾರೆ ಎಂದರೆ ಅದು ಸೃಷ್ಟಿತ ದಾಖಲೆಯಾಗಿದೆ ಎನ್ನುತ್ತಾರೆ. ನಿ.ಆರ್.1ರ ದಾಖಲೆ ನೀಡಿರುವ ವೈದ್ಯರನ್ನು ಸಾಕ್ಷಿದಾರರಾಗಿ ವಿಚಾರಣೆ ಮಾಡಲು ತೊಂದರೆ ಇದೆಯಾ ಎಂದರೆ ಅದು ನನಗೆ ಸಂಬಂಧಪಡುವುದಿಲ್ಲ. ಅರ್ಜಿದಾರರಿಗೆ ಪರಿಹಾರದ ಹಣವನ್ನು ಕೊಡಬೇಕಾಗುತ್ತದೆ ಎಂದು ನಾನು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಗೋಣಿಕೊಪ್ಪ ಪೋಲೀಸ್ ತನಿಖಾಧಿಕಾರಿಗಳು ಸಲ್ಲಿಸಿರುವ ದೋಷಾರೋಪಣ ಪತ್ರ ಸಮರ್ಪಕವಾಗಿ ಇರುವುದರಿಂದ ನಾವು ಅದನ್ನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. 1 ಮತ್ತು 2ನೇ ಎದುರುದಾರರ ತಪ್ಪಿನಿಂದಲೇ ಅಪಘಾತವಾಗಿರುವ ಕಾರಣ ಅವರು ತಪ್ಪೊಪ್ಪಿಕೊಂಡು ದಂಡ ಕಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ತಪ್ಪೊಪ್ಪಿಕೊಂಡಿರುವ ವಿಚಾರ ಸರಿಯಾಗಿ ಇರುವುದರಿಂದಲೇ ನಾನು ಅವರ ವಿರುದ್ಧ ಯಾವುದೇ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.